ರಾಯನಾಳ ಗ್ರಾಮದ ಪ್ರೌಢ ಶಾಲೆಯನ್ನು ಮೇಲ್ದರ್ಜೆಗೇರಿಸುವುದು

473 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ತಾಲ್ಲೂಕಿನ ರಾಯನಾಳ ಗ್ರಾಮದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಆ) ಆ ಪ್ರೌಢಶಾಲೆಯನ್ನು ಸರ್ಕಾರಿ ಪದವಿ ಪೂರ್ವ ಕಾಲೇಜನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಇ) ಹಾಗಿದ್ದಲ್ಲಿ ಅದನ್ನು ಯಾವಾಗ ಮೇಲ್ದರ್ಜೆಗೇರಿಸಲಾಗುವುದು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ರಾಯನಾಳ ಸರ್ಕಾರಿ ಪ್ರೌಢಶಾಲೆಯಲ್ಲಿ 210 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಆ) ರಾಯನಾಳ ಸರ್ಕಾರಿ ಪ್ರೌಢಶಾಲೆಯನ್ನು ಪದವಿ ಪೂರ್ವ ಕಾಲೇಜಾಗಿ ಸರ್ಕಾರವು ಈಗಾಗಲೇ ಪರಿವರ್ತಿಸಿದೆ.

ಇ) ಸರ್ಕಾರಿ ಆದೇಶ ಸಂಖ್ಯೆ ಇಡಿ 420 ಎಸ್ಇಟ್ಟಿಬ್ಲ್ಯು 91 ದಿನಾಂಕ 11-9-1991ರಲ್ಲಿ ರಾಯನಾಳ ಸರ್ಕಾರಿ ಪ್ರೌಢಶಾಲೆಯನ್ನು ಪದವಿ ಪೂರ್ವ ಕಾಲೇಜಾಗಿ 1991-92ನೇ ಸಾಲಿನಿಂದ ಮೇಲ್ದರ್ಜೆಗೇರಿಸಿದೆ.

ಕಾದಿಟ್ಟ ಅರಣ್ಯ ಪ್ರದೇಶದ ಒತ್ತುವರಿಯ ಸಕ್ರಮ

539 - ಶ್ರೀ ಆರ್. ನಾರಾಯಣ (ಬೆಳ್ಳಾವಿ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾದಿಟ್ಟ ಅರಣ್ಯ ಪ್ರದೇಶಗಳೆಂದು ಮಹಾರಾಜ ಸರ್ಕಾರದಲ್ಲಿ (1917, 1927) ಘೋಷಿಸಿರುವ ಪ್ರದೇಶಗಳ ಗಡಿಗಳು ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆಯೆ?

ಆ) ಸದರಿ ಕಾದಿಟ್ಟ ಅರಣ್ಯ ಪ್ರದೇಶಗಳನ್ನು ಅತಿಕ್ರಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಅತಿಕ್ರಮಣದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದ್ದಲ್ಲಿ ಅದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಈ) ಕಾದಿಟ್ಟ ಅರಣ್ಯಗಳೆಂದು ಘೋಷಿಸಲ್ಪಟ್ಟಂತಹ ಪ್ರದೇಶವು ಕಂದಾಯ ಇಲಾಖೆಯ ದಾಖಲಾತಿಗಳಲ್ಲಿ ನಮೂದಿಸಲ್ಪಟ್ಟಿದೆಯೇ?

ಉ) 'ಸಿ ಮತ್ತು ಡಿ' ವರ್ಗದ ಪ್ರದೇಶಗಳಲ್ಲಿ ಸಾಮಾಜಿಕ ಅರಣ್ಯೀಕರಣ ನಡೆದಿದ್ದು ಸದರಿ ಜಮೀನು ಅರಣ್ಯ ಇಲಾಖೆಗೆ ಕಂದಾಯ ಇಲಾಖೆಯಿಂದ ವರ್ಗಾಯಿಸಲ್ಪಟ್ಟಿದೆಯೇ?

ಊ) ಸದರಿ 'ಸಿ ಮತ್ತು ಡಿ' ವರ್ಗದ ಜಮೀನುಗಳು ಕಂದಾಯ ಇಲಾಖೆಯಿಂದ ವರ್ಗಾವಣೆ ಆಗದಿದ್ದಲ್ಲಿ ಸರ್ಕಾರವರು ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

ಋ) ಸಾಮಾಜಿಕ ಅರಣ್ಯೀಕರಣ ಇದ್ದ ನೆಡುತೋಪುಗಳಲ್ಲಿ ಅಕ್ರಮಸಾಗುವಳಿ ಮಾಡಿ ಸಕ್ರಮಗೊಳಿಸಲು ತಾಲ್ಲೂಕು ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಸಮಿತಿಯ ಮುಂದೆ ಅರ್ಜಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಋೂ) ಬಂದಿದ್ದಲ್ಲಿ ಆ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):

ಅ) ನಿರ್ವಹಿಸಲಾಗುತ್ತಿದೆ.

ಆ) ಬಂದಿದೆ.

ಇ) ದಿನಾಂಕ : 27-4-78ರ ಪೂರ್ವದಲ್ಲಾದ ಅತಿಕ್ರಮಣಗಳನ್ನು ಸಕ್ರಮಗೊಳಿಸಲು ಸರ್ಕಾರದ ಆದೇಶ ಸಂ: ಎಹೆಚ್ಎಫ್ಎಫ್ 5 ಎಫ್ಜಿಎಲ್ 90 (ವಾಲ್ಯೂಂ- 2) ದಿ: 9-11-92ರಲ್ಲಿ ತಾಲ್ಲೂಕು ಮಟ್ಟದ ಸಮಿತಿಗಳನ್ನು ರಚನೆ ಮಾಡಿದೆ. ತಾಲ್ಲೂಕು ಮಟ್ಟದ ಸಮಿತಿ ಶಿಫಾರಸ್ಸಿನಂತೆ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಮೇರೆಗೆ ಪೂರ್ವಾನುಮತಿ ದೊರಕಿದರೆ ಸಕ್ರಮಗೊಳಿಸಲಾಗುವುದು. ಮತ್ತು ದಿನಾಂಕ : 27-4-78ರ ನಂತರದ ಅರಣ್ಯ ಅತಿಕ್ರಮಣಗಳನ್ನು ತೆರವುಗೊಳಿಸಲು 10-10-91ರ ಅದೇ ಸಂಖ್ಯೆಯ ಆದೇಶದಲ್ಲಿ ಸೂಚಿಸಲಾಗಿದೆ.

ಈ) ರಾಜ್ಯದ ಕೆಲವು ಭಾಗಗಳಲ್ಲಿ ನಮೂದಿಸಲಾಗಿದೆ ಇನ್ನೂ ಕೆಲವು ಕಡೆ ಮಾಡುವುದಿದೆ.

ಉ) ಸರ್ಕಾರವು ತನ್ನ ಆದೇಶ ಸಂ. ಆರ್.ಡಿ 106 ಎಲ್ಜಿಪಿ 88, ದಿ: 7-6-93ರಲ್ಲಿ ಲ್ಯಾಂಡ್ ಬ್ಯಾಂಕ್ಗೆ 2.58 ಲಕ್ಷ ಹೆಕ್ಟೇರ್ ಸಿ ಮತ್ತು ಡಿ ವರ್ಗದ ಜಮೀನನ್ನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಹಸ್ತಾಂತರಿಸಲು ಆದೇಶ ಮಾಡಿದೆ ಇದು ಈಗಾಗಲೇ ನೆಡುತೋಪು ಬೆಳೆಸಿರುವ 1.25 ಲಕ್ಷ ಹೆಕ್ಟೇರ್ ಹಾಗೂ ಸೆಕ್ಷನ್ 4ರ ಅಧಿಸೂಚನೆ ಹೊರಡಿಸಿರುವ 67,000 ಹೆಕ್ಟೇರ್ ಸಿ ಮತ್ತು ಡಿ ವರ್ಗದ ಜಮೀನು ಹೊರತುಪಡಿಸಿದೆ.

ಊ) ಈ ಬಗ್ಗೆ ಸರ್ಕಾರದ ಪತ್ರ ಸಂಖ್ಯೆ : ಎಹೆಚ್ಎಫ್ಎಫ್ 7 ಎಫ್ಎಎಫ್ 93, ದಿ: 15-7-93ರಲ್ಲಿ ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಅವರ ಅಧೀನದಲ್ಲಿರುವ ಸಿ ಮತ್ತು ಡಿ ವರ್ಗದ ಜಮೀನುಗಳನ್ನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಹಸ್ತಾಂತರಿಸಲು ಕೋರಲಾಗಿದೆ.

ಋ) ಇಲ್ಲ

ಋೂ) ಉದ್ಭವಿಸುವುದಿಲ್ಲ.